**Crl. Msic. 123/26**

**<u>ಮಧ್ಯಂತರ ಅರ್ಜಿ 1 ರ ಮೇಲೆ ಆದೇಶ</u>**

ಅರ್ಜಿದಾರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಬಿ.ಎನ್.ಎಸ್.ಎಸ್.482(1) ರಡಿಯಲ್ಲಿ ಅರ್ಜಿ ಸಲ್ಲಿಸಿ ಮಾನ್ಯ ನ್ಯಾಯಾಲಯವು ಸದರಿ ಜಾಮೀನು ಅರ್ಜಿ ಇತ್ಯರ್ಥ ಆಗುವವರೆಗೆ ಅರ್ಜಿದಾರರಿಗೆ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಜಾಮೀನು ಅರ್ಜಿ ಪರಿಶೀಲಿಸಲಾಗಿ ಎದುರುದಾರ ಪೊಲೀಸರು ಅರ್ಜಿದಾರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 418, 420, 465, 466, 474, 471 ಸಹಕಲಂ. 34 ಹಾಗೂ ನೋಂದಣಿ ಕಲಂ. 82 ಮತ್ತು 83 ರಡಿಯಲ್ಲಿ ಕೇಸು ದಾಖಲು ಮಾಡಿರುತ್ತಾರೆ. ಸದರಿ ಪ್ರಕರಣ ಜಾಮೀನು ರಹಿತವಾದಂತಹ ಪ್ರಕರಣವಾಗಿದ್ದರೂ ಸಹಿತ ಜೀವಾವಧಿ ಶಿಕ್ಷೆ, ಮರಣದಂಡನೆ ವಿಧಿಸತಕ್ಕಂತಹ ಆಪಾದನೆ ಆಗಿರುವುದಿಲ್ಲ. ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ನಡೆಯತಕ್ಕಂತಹ ಪ್ರಕರಣ ಆಗಿರುತ್ತದೆ.

ದೂರನ್ನು ಪರಿಶೀಲಿಸಲಾಗಿ ದಿಃ26.09.2024 ರಂದು ಅರ್ಜಿದಾರರ ಹೆಸರಿನಲ್ಲಿ ಕ್ರಯ ಪತ್ರವಾಗಿದ್ದು ದೂರನ್ನು ದಿಃ11.02.2026 ರಂದು ಕೊಟ್ಟಿದ್ದು, ಅರ್ಜಿದಾರರು ಹಾಜರುಪಡಿಸಿದಂತಹ ದಾಖಲೆಗಳನ್ನು ಪರಿಶೀಲಿಸಲಾಗಿ ಸಂಪೂರ್ಣ ಸಿವಿಲ್ ಸ್ವರೂಪದ ಪ್ರಕರಣವಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯ (ಕ್ರಿ.ನಂ.538/2009 ಲಾಲ್ ಕಮಲೇಂದ್ರ ಪ್ರತಾಪ್ ಸಿಂಗ್ ವಿರುದ್ಧ ಉತ್ತರ ಪ್ರದೇಶ ರಾಜ್ಯ ಮತ್ತು ಎಸ್.ಎಲ್.ಪಿ.

ಕ್ರಿಮಿನಲ್ ನಂ.3224/2010 ಮುಕೇಶ್ ಕೃಷ್ಣ ಪುರಿ ವಿರುದ್ಧ ಪಶ್ಚಿಮಬಂಗಾಳ) ತೀರ್ಪಗಳನ್ನು ಪರಿಶೀಲಿಸಲಾಗಿ ಸದರಿ ತೀರ್ಪುಗಳು ದಾಖಲಾತಿಗಳನ್ನು ಸೃಷ್ಟನೆ ಮಾಡಿಕೊಂಡಂತಹ ಅಪರಾಧಕ್ಕೆ ಸಂಬಂಧಪಟ್ಟಂತಹ ಪ್ರಕರಣ ದಾಖಲಾಗಿದ್ದು ಇಂತಹ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮುಖ್ಯ ಅರ್ಜಿ ಇತ್ಯರ್ಥ ಆಗುವವರೆಗೆ ಮಧ್ಯಂತರ ತಾತ್ಕಾಲಿಕ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದರ ಬಗ್ಗೆ ತೀರ್ಪುಗಳು ಇರುತ್ತದೆ.

ಸದರಿ ತೀರ್ಪುಗಳನ್ನು ಈ ಪ್ರಕರಣಕ್ಕೆ ಪರಿಶೀಲಿಸಲಾಗಿ ಅಶಜಿದಾರರ ಮೇಲೆ ಇರುವ ಪ್ರಕರಣವೂ ಸಹಿತ ದಾಖಲೆಗಳನ್ನು ಸೃಷ್ಟನೆ ಮಾಡಿಕೊಂಡಂತಹ ಪ್ರಕರಣ ಆಗಿರುತ್ತದೆ ಹಾಗೂ 1ನೇ ಅರ್ಜಿದಾರ 67 ವಯಸ್ಸಿ ನ ಹಿರಿಯ ನಾಗರೀಕರಾಗಿದ್ದು ಅವರ ಆರೋಗ್ಯ ಸರಿ ಇರುವುದಿಲ್ಲ ಹಾಗೂ ಸದರಿ ಪ್ರಕರಣ ಸಿವಿಲ್ ಸ್ವರೂಪದ ಪ್ರಕರಣ ಆಗಿರುವುದರಿಂದ ಇಂತಹ ಸಂದರ್ಭದಲ್ಲಿ ಮಧ್ಯಂತರ ನೀರಿಕ್ಷಣಾ ಜಾಮೀನು ನೀಡದಿದ್ದಲ್ಲಿ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಅರ್ಜಿದಾರರಿಗೆ ತೊಂದರೆ ಉಂಟಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಕೆಳಗಿನಂತೆಃ

**<u>ಆದೇಶ</u>**

ಅರ್ಜಿದಾರ ಪರ ವಕೀಲರು ಸಲ್ಲಿಸಿದ ಬಿ.ಎನ್.ಎಸ್.ಎಸ್. ಕಲಂ.482(1) ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಯಿತು.

ಒಂದು ವೇಳೆ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಸದರಿಯವರ ಕಡೆಯಿಂದ ತಲಾ 50,000/- ರೂ. ಸ್ವಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಜಾಮೀನನ್ನು ಪಡೆದುಕೊಂಡು ಬಿಡುಗಡೆ ಮಾಡಲು ಆದೇಶಿಸಲಾಯಿತು.

ಜಾಮೀನು ಅರ್ಜಿಯ ನೋಟಿಸನ್ನು ಸರ್ಕಾರಿ ಅಭಿಯೋಜಕರಿಗೆ ಕಳುಹಿಸಲು ಆದೇಶಿಸಲಾಯಿತು.

ಜಾಮೀನು ಅರ್ಜಿಗೆ ತಕರಾರು ಸಲ್ಲಿಸಲು ದಿಃ27.02.2026 ರಂದು ದಿನಾಂಕ ನಿಗದಿ ಪಡಿಸಲಾಯಿತು.

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.